ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**1129/2023.**

ದಿನಾಂಕ:**14-07-2026** ರಂದು ಮಧ್ಯಾಹ್ನ **3.00** ಗಂಟೆಗೆ ಸಾಕ್ಷಿಯು **video conference** ಮೂಲಕ ಹಾಜರಾಗಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ವಸಂತಾಚಾರ್ | ಚಾಸಾ -20<br>ಪ್ರಾಸಾ -7 |
| ತಂದೆಯ ಹೆಸರು | ರಾಮಾಚಾರ್ | |
| ವಯಸ್ಸು (ವರ್ಷಗಳಲ್ಲಿ) | 60 | |
| ಉದ್ಯೋಗ | ನಿವೃತ್ತ ಸಿ ಪಿ ಐ | |
| ವಾಸ | ಕುಮ್ಟ | |

ಮಾನ್ಯ ಸ.ಸ.ಅ.ರವರು ಹಾಗೂ ಆರೋಪಿ ಪರ ವಕೀಲರು ಸಹಃ **video conference** ಮೂಲಕ ತೆರೆದ ನ್ಯಾಯಾಲಯದಲ್ಲಿಯೇ ಇದ್ದು ಹಾಜರಾಗಿರುತ್ತಾರೆ.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 03.02.2023 ರಿಂದ 08.06.2023 ರ ವರೆಗೂ ಕಡೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ03.02.2023 ರಂದು ಈ ಕೇಸಿನ ಕಡತವನ್ನು ಚಾಸಾ 19 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ತನಿಖೆ ಮುಂದುವರೆಸಿರುತ್ತೇನೆ.

ನಂತರ, ದಿಃ08.03.2023 ಚಾಸಾ 14 ರವರಿಂದ ಪಿ ಎಂ ವರದಿ ಪಡೆದಿರುತ್ತೇನೆ. ಅದನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ8 ಎ ಎಂದು ಗುರುತಿಸಲಾಯಿತು. ಅದೇ ದಿನ ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳ ಐ ಎಂ ವಿ ವರದಿ ಪಡೆದಿರುತ್ತೇನೆ, ಅದನ್ನು ನಿಪಿ 9 ಎಂದು ಸಾಕ್ಷಿಯ ಸಹಿಯನ್ನು ನಿಪಿ9 ಎ ಎಂದು ಗುರುತಿಸಲಾಯಿತು.

ನಂತರ ತನಿಖೆಯು ಪೂರ್ಣಗೊಂಡಿದ್ದರಿಂದ ಆರೋಪಿಯವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಸಿ ಬಿ ವಕೀಲರಿಂದಃ

ಆರೋಪಿಯು ಯಾವುದೇ ತಪ್ಪು ಮಾಡಿಲ್ಲದಿದ್ದರು ಸದರಿಯವರ ಬಳಿ ವಿಮೆ ಮತ್ತು ಡಿ ಎಲ್ ಇದೆ ಎಂಬ ಕಾರಣಕ್ಕೆ ಸದರಿಯವರ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಿವಾದಿತ ಬೈಕಿಗೆ ವಿಮೆ ಇರದಿದ್ದ ಕಾರಣದ ಸದರಿ ದಾಖಲೆಯನ್ನು ಅಂತಿಮ ವರದಿಯಲ್ಲಿ ಹಾಕಿಲ್ಲ. ಆ ದಿನ ಯಾವ ಯಾವ ಬೈಕ್ ಗಳು ಸದರಿ ರಸ್ತೆಯಲ್ಲಿ ಓಡಾಡಿದೆ ಮತ್ತು ಯಾವ ಬೈಕ್ ನಿಂತಿದ್ದ ಲಾರಿಗೆ ಡಿಕ್ಕಿ ಪಡಿಸಿದೆ

ಎಂದು ಅಂತಿಮ ವರದಿಯಲ್ಲಿ ನಮೂದಿಸಿದ್ದೀರಾ ಎಂದು ಪ್ರಶ್ನಿಸಿದ್ದು ಸಾಕ್ಷಿಯು ಸದರಿಯನ್ನು ನಮೂದಿಸುವುದು ಕಷ್ಟ ಮತ್ತು ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎನ್ನುತ್ತಾರೆ.

ಮೃತ ಗಿರೀಶ್ ಹಾಗೂ ಸುದೀಪ್ ಮತ್ತು ಯಶ್ವಂತ್ ರವರು ಯಾವ ಯಾವ ಬೈಕಿನಲ್ಲಿ ಹೋಗುತ್ತಿದ್ದರು ಎಂದು ಅಂತಿಮ ವರದಿಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ಮೂರು ಜನ ಕೆಎ 18 ಕ್ಯೂ 6077 ರಲ್ಲಿ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಹೆಲ್ಮೇಟ್ ಪುಡಿಪುಡಿಯಾಗಿರುವ ವಿಚಾರವನ್ನು ಅಂತಿಮ ವರದಿಯಲ್ಲಿ ನಮೂದಿಸಲಾಗಿದೆ.

ಮೃತರ ಕುಟುಂಬಕ್ಕೆ ಅಪಘಾತದ ಪರಿಹಾರ ಕೊಡಿಸಬೇಕೆಂದು ಆರೋಪಿಯ ಅಪಘಾತ ಪಡಿಸಿಲ್ಲದಿದ್ದರು ಸದರಿಯವರ ಬೈಕಿಗೆ ವಿಮೆ ಇದ್ದು ಆತನಿಗೆ ಡಿ ಎಲ್ ಇದೆ ಎಂಬ ಕಾರಣಕ್ಕೆ ಆತನ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಲಾರಿಯು ಇಂಡಿಕೇಟರ್ ಅಳವಡಿಸಿ ರಸ್ತೆಯ ಹಂಚಿನಲ್ಲಿ ನಿಲ್ಲಿಸಿದ್ದರು ಕೂಡ ಬೈಕಿನ ಚಾಲಕನೆ ಸ್ವತಃ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ಸಾವಿಗೆ ಆರೋಪಿಯ ಕಾರಣನಲ್ಲದಿದ್ದರು ಹಾಗೂ ಮೃತನೊಂದಿಗೆ ಇದ್ದ ಸುದೀಪ್ ಮತ್ತು ಯಶ್ವಂತ್ ರವರು ಸ್ವತಃ ಅತೀವೇಗ ಮತ್ತು ಅಜಾಗರುಕತೆಯಿಂದ ಬಂದು ಲಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಸದರಿ ಗೀರಿಶ್ ರವರ ಮರಣವಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕು ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರು ಆರೋಪಿಯ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.